# ಭಾಸ್ಕರ ಆಚಾರ್ಯ ವಿವೇಕ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮುಖ್ಯೋಪಾಧ್ಯಾಯರಾಗಿ ಆಯ್ಕೆ



ಕೋಟ ವಿದ್ಯಾಸಂಘ (ರಿ) ಕೋಟ, ಉಡುಪಿ ಜಿಲ್ಲೆ ಇದರ ಅಂಗ ಸಂಸ್ಥೆಯಾದ ವಿವೇಕ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಕಳೆದ 4 ವರ್ಷಗಳಿಂದ ಅವಿಸ್ಮರಣೀಯವಾಗಿ ಸೇವೆ ಸಲ್ಲಿಸುತ್ತಿದ್ದ ಪಿ.ಶ್ರೀಪತಿ ಹೇರ್ಳೆಯವರು ವಯೋನಿವೃತ್ತಿ ಹೊಂದಿರುತ್ತಾರೆ. ಕೋಟ ವಿದ್ಯಾಸಂಘದ ಆಡಳಿತ ಮಂಡಳಿಯವರು ಭಾಸ್ಕರ ಆಚಾರ್ಯ, ನಿವೃತ್ತ ಶಿಕ್ಷಕರವರನ್ನು ವಿವೇಕ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರನ್ನಾಗಿ ನೇಮಿಸಿ ಅಧಿಕಾರ ಹಸ್ತಾಂತರ ಮಾಡಿರುತ್ತಾರೆ. ಆಡಳಿತ ಮಂಡಳಿಯ ಅಧ್ಯಕ್ಷರು, ಸಹಕಾರ್ಯದರ್ಶಿ, ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

# ನಾಯ್ಕನಕಟ್ಟೆ ಕೆ.ಪುಂಡಲೀಕ ನಾಯಕರಿಗೆ ಕರ್ನಾಟಕ ವಿಭೂಷಣ ರಾಜ್ಯ ಪ್ರಶಸ್ತಿ



ಉದಯಭಾನು ಕಲಾಸಂಘ ಆಡಿಟೋರಿಯಮ್ ಕೆಂಪೇಗೌಡ ನಗರ ಬೆಂಗಳೂರು ಇಲ್ಲಿ ಜರಗಿದ ಸರ್.ಎಮ್.ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ (ರಿ) ಬೆಂಗಳೂರು ಇವರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕರ್ನಾಟಕ ಸರಕಾರ ಇವರ ಸಹಯೋಗದಲ್ಲಿ ಸಾಹಿತ್ಯ ಮತ್ತು ಸಂಘಟನೆ ಕ್ಷೇತ್ರದಲ್ಲಿನ ಸಾಧನೆಯನ್ನು ಪರಿಗಣಿಸಿ ಕೊಡಮಾಡಿದ "ಕರ್ನಾಟಕ ವಿಭೂಷಣ ರಾಜ್ಯ ಪ್ರಶಸ್ತಿಯನ್ನು ಸಾಹಿತಿ ನಾಯ್ಕನಕಟ್ಟೆ ಕೆ. ಪುಂಡಲೀಕ ನಾಯಕ್ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಗುರೂಜಿ ಶ್ರೀ ದುರ್ಗಾ ಆದಿಶಕ್ತಿ ಕ್ಷೇತ್ರ, ದೊಡ್ಡಣಗುಡ್ಡೆ ಉಡುಪಿ, ಇವರ ಆಶೀರ್ವಾದ ಲಭಿಸಿತು. ಕಲ್ಮೇಶ್ವರ ಸ್ವಾಮಿಗಳು ಚಿಪ್ಪಲಕಟ್ಟಿ, ಹಿರಿಯ ಚಲನಚಿತ್ರ ಕಲಾವಿದ ಶಂಕರ್ ಭಟ್ಟ್ ಬೆಂಗಳೂರು, ಡಾ.ಸತೀಶ್ ಕುಮಾರ್ ಎಸ್. ಹೊಸಮನಿ ನಿರ್ದೇಶಕರು ಸಾರ್ವಜನಿಕ ಗ್ರಂಥಾಲಯ ಇಲಾಖೆ ಕರ್ನಾಟಕ ಸರಕಾರ. ಡಾ. ಶೇಖರ ಗೌಡ ಮಾಲಿ ಪಾಟೀಲ್ ಸಾಹಿತಿಗಳು ಕೊಪ್ಪಳ, ಡಾ. ರಾಜೇಂದ್ರ ಎಸ್ ಗಡಾದ ಗದಗ.

ಡಾ.ಕೆ. ಮಹೇಂದ್ರ ಸಿಂಗ್ ರಾಜಪುರೋಹಿತ್ ಗೌರವ ಅಧ್ಯಕ್ಷರು ವಿಶ್ವೇಶ್ವರಯ್ಯ ಪ್ರತಿಷ್ಠಾನ , ಪ್ರತಿಷ್ಠಾನದ ಅಧ್ಯಕ್ಷ ರಮೇಶ್ ಸುರ್ವೆ ಹಿರಿಯ ಪತ್ರಕರ್ತರು, ಚಲನಚಿತ್ರ ನಿರ್ದೇಶಕರು ವೇದಿಕೆಯಲ್ಲಿ ಉಪಸ್ಥಿತರಿದ್ದು ಸನ್ಮಾನ ನೀಡಿದರು.

# ಕುಂದಾಪುರ ಕಥೊಲಿಕ್ ಸಭಾ ಘಟಕದಿಂದ ಗಾಂಧಿ ಜಯಂತಿ – ಸ್ವಚ್ಚತಾ ಅಭಿಯಾನ



ಕುಂದಾಪುರ ಕಥೊಲಿಕ್ ಕುಂದಾಪುರ ಘಟಕದಿಂದ ಗಾಂಧಿ ಜಯಂತಿ ಆಚರಣೆಯನ್ನು ಮತ್ತು 'ನಿರ್ಮಲ ಪರಿಸರ ನಮ್ಮ ಕರ್ತವ್ಯ' ಇದರ ಧ್ಯೇಯದೊಂದಿಗೆ ಸ್ವಚತಾ ಆಭಿಯಾನವನ್ನು ಆಚರಿಸಲಾಯಿತು. ಕುಂದಾಪುರ ಚರ್ಚ್ ಸಭಾ ಭವನದಲ್ಲಿ ನಡೆದ ಗಾಂಧಿ ಜಯಂತಿ ಆಚರಣೆ ಪ್ರಯುಕ್ತ ಗಾಂಧಿಜಿಗೆ ಪುಷ್ಪಾರ್ಚಣೆ ಮಾಡಿ ನಮನ ಸಲ್ಲಿಸಲಾಯಿತು, ಮುಖ್ಯ ಅತಿಥಿಗಳಾದ ಚರ್ಚಿನ ಪ್ರಧಾನ ಧರ್ಮಗುರು ವಂ|ಸ್ಟ್ಯಾನಿ ತಾವ್ರೊ ಗಾಂಧಿಜಯಂತಿಯ 'ಸಂದೇಶ ನೀಡಿದರು. ಈ ಸಂದರ್ಭದಲ್ಲಿ ಸಹಾಯಕ ಧರ್ಮಗುರು ವಂ|ವಿಜಯ್ ಡಿಸೋಜಾ, ಪಾಲನ ಮಂಡಳಿ ಉಪಾಧ್ಯಕ್ಷ ಎಲ್.ಜೆ.ಫೆರ್ನಾಂಡಿಸ್, ಕಾರ್ಯದರ್ಶಿ ಆಶಾ ಕರ್ವಾಲೊ, ಆಯೋಗದ ಸಂಯೋಜಕಿ ಪ್ರೇಮಾ ಡಿಕುನ್ಹಾ, ಕಥೊಲಿಕ್ ಸಭಾದ ಪದಾಧಿಕಾರಿಗಳಾದ ಶೈಲಾ ಡಿಆಲ್ಮೇಡಾ, ವಿನೋದ್ ಕ್ರಾಸ್ಟೊ, ಡಾ. ಸೋನಿ ಡಿಕೋಸ್ತಾ, ಲೋನಾ ಲುವಿಸ್, ಕಾರ್ಯಕಾರಿ ಸಮಿತಿಯ ಲೋಯ್ ಕರ್ವಾಲ್ಲೊ, ಜೋಯ್ ಕರ್ವಾಲ್ಲೊ, ಮುಂತಾದವರು ಹಾಜರಿದ್ದರು.. ನಂತರ ಚರ್ಚ್ ರಸ್ತೆಯಲ್ಲಿ ಸ್ವಚ್ಚತಾ ಅಭಿಯಾನ ಮಾಡಲಾಯಿತು. ಕಥೊಲಿಕ್ ಸಭೆಯ ಅಧ್ಯಕ್ಷರಾದ ಬರ್ನಾಡ್ ಡಿಕೋಸ್ತಾ ಸ್ವಾಗತಿಸಿದರು, ಕಾರ್ಯದರ್ಶಿ ಎಲ್ರಿನ್ ಡಿಸೋಜ ವಂದಿಸಿದರು.

# ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಕುಂದಾಪುರ – ಬೈಂದೂರು ತಾಲೂಕು ಹವ್ಯಕ ಸಭಾದ ಮಹಾಸಭೆ ಅಕ್ಟೋಬರ್ 31 ಆದಿತ್ಯವಾರದಂದು ಉಪ್ಪುಂದ ರಾಘವೇಂದ್ರ ಸ್ವಾಮೀ ಮಠದಲ್ಲಿ ನಡೆಯಲಿದ್ದು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಕುಂದಾಪುರ, ಬೈಂದೂರು ತಾಲೂಕಿನಲ್ಲಿ ವ್ಯಾಸಂಗ ಮಾಡುತ್ತಿರುವ ಹವ್ಯಕ ಸಮಾಜದ ವಿದ್ಯಾರ್ಥಿಗಳಿಗೆ 2019–20 ಮತ್ತು 2020–21 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಯಲ್ಲಿ ಶೇಕಡಾ 90 ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಅಂಕಪಟ್ಟಿ ಪೋಟೊದೊಂದಿಗೆ ಕೈಬರಹದ ಅರ್ಜಿಯನ್ನು ಪ್ರಧಾನ ಕಾರ್ಯದರ್ಶಿಯಾದ ಯು. ಸಂದೇಶ ಭಟ್ಟ ಪಟೇಲರ ಮನೆ ಉಪ್ಪುಂದ ಪೋಸ್ಟ್, ಬೈಂದೂರು ತಾಲೂಕು 576232. ಮೊಬೆಲ್ ನಂ : 9449616434, ಈ ವಿಳಾಸಕ್ಕೆ ಅಕ್ಟೋಬರ್ 25 ಒಳಗೆ ತಲುಪುವಂತೆ ಕಳುಹಿಸಬೇಕಾಗಿ ಪ್ರಕಟಣೆಯಲ್ಲಿ ತಿಳಿಸಿದೆ.

# ರಾಮಕೃಷ್ಣ ಭಟ್ ರಾಯಸರು ಕಳಂಜಿ

ಈಗಲೂ ಅವರ ಮನೆಯ ಮೂಲೆಯ ಜಗಲಿಯಲ್ಲಿ ಕುಳಿತು,ಹತ್ತಿರದಲ್ಲೇ ಅವರ ಕವಳದ ಸಂಚಿ ,ಒಂದು ಹಿತ್ತಾಳೆ ಪೆಟ್ಟಿಗೆ ಅದರ ಪಕ್ಕವೇ ಕವಳ ಕುಟ್ಟುವ ಕುಟಾಣಿ ಗುಂಡು ಕಲ್ಲು ಇವಿಷ್ಟು ಅವರ ಆ ನೆನಪುಗಳು ನನ್ನನ್ನೂ ಇಂದಿಗೂ ಕಾಡುವುದು. . ನನ್ನ ಹೆಸರನ್ನು ಅವರ ಬಾಯಲ್ಲೇ ಕರೆಯುವಾಗ ಅಷ್ಟು ಆಪ್ತತೆ ಮನಸ್ಸಿಗೆ ತಂದುಕೊಡುತ್ತದೆ.

ಅಮ್ಮನ ತವರು ಮನೆಯ ಕಡೆ ಹೋದರಂತೂ ಅಜ್ಜನ ಸ್ವಾಗತ ಕಣ್ಣಿಗೆ ಈಗಲೂ ಕಟ್ಟಿದಂತೆ,ಅವರ ಜೊತೆ ಕುಳಿತು ಒಂದೆರಡು ಮಾತು,ಹೀಗೆ ಲೋಕಾಭಿರಾಮ ಮಾತನಾಡಿ ಕೊಂಡು ಬರುತ್ತಿದ್ದೆವು. ರಾಮಕೃಷ್ಣ ಅಜ್ಜನ ಪ್ರತಿ ನೆನಪುಗಳು ಈಗಲೂ ಮನಸ್ಸಿನಲ್ಲಿ ಹಸಿಯಾಗಿದೆ. ,ನೆನಪಿಸಿದಂತೆ ಕಣ್ಣು ಮಂಜಾಗುತ್ತದೆ.

ನಾವಿನ್ನೂ ಆಗ ಚಿಕ್ಕವರು ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರೆಂದು ಅಷ್ಟೇ ಗೊತ್ತು.ದೊಡ್ಡವರಾಗುತ್ತಿದ್ದಂತೆ ಅವರ ದೇಶಪ್ರೇಮ ಚಳುವಳಿಯ ಸಮಯದಲ್ಲಿ ಜೈಲುಪಾಲಾದ ರೋಚಕ ವಿಷಯಗಳನ್ನು ಕೇಳುವಾಗ ಮೈನವಿರೇಳುತ್ತದೆ.ಅವರನ್ನು ಹತ್ತಿರದಿಂದ ನೋಡಿದ ನಮಗೆ ಅವರ ಕಷ್ಟದ ಜೀವನದ ಅರಿವು ಕಣ್ಣಿಗೆ ಕಟ್ಟಿದಂತೆ ರಾಚುತ್ತದೆ.ಈಗಲೂ ಕಣ್ಣಂಚು ಒದ್ದೆಯಾಗುವುದು ನಿಜ .

ದಿವಂಗತ ರಾಮಕೃಷ್ಣಭಟ್ ರಾಯಸರು ಹುಟ್ಟಿದ್ದು ನವೆಂಬರ್ ಇಪ್ಪತ್ತೊಂದು 1916 ನೇ ಇಸವಿ .ಕುಂದಾಪುರ ತಾಲ್ಲೂಕಿನ ಬಸ್ರೂರು ಗ್ರಾಮದ ಆನಗಳ್ಳಿ ಸಮೀಪದ ಕಳಂಜಿಯವರು. ತಂದೆ ಸುಬ್ರಾಯ ಭಟ್, ತಾಯಿ ಶೇಷಮ್ಮ ನವರು.ಇವರ ಪ್ರಾಥಮಿಕ ವಿದ್ಯಾಭ್ಯಾಸವೆಲ್ಲ ಬಸ್ರೂರಿನಲ್ಲೇ ಆಯಿತು. ಆಮೇಲೆ ಉದ್ಯೋಗ ನಿಮಿತ್ತ ಹೀರೆಕೇರೂರಿಗೆ ಪಯಣ...ಬದುಕನ್ನು ತುಂಬಾ ಕಷ್ಟದಲ್ಲೇ ಕಳೆದರು..ಅದರಲ್ಲೂ ಅವರ ದೇಶಪ್ರೇಮದ ದಾಹ ಎಡಬಿಡದೆ ಅವರನ್ನು ಆ ದಿನಗಳಲ್ಲಿ ಕಾಡಿತ್ತು. ಆಮೇಲೆ ಮದುವೆ ಪತ್ನಿ ಶ್ರೀಮತಿ ಲಿಂಗಮ್ಮ... ಮೂವರು ಗಂಡು ಮಕ್ಕಳು ನಾಲ್ಕು ಜನ ಹೆಣ್ಣುಮಕ್ಕಳು. ಮದುವೆಯಾದ ಆರು ತಿಂಗಳಿಗೆ ಜೈಲು ಪಾಲಾದರಂತೆ,ದೇಶ ಸ್ವಾತಂತ್ರ್ಯದ ಕಾಣುವ ಕಿಚ್ಚು ಬಿಸಿ ರಕ್ತದ ತರುಣ ನಮ್ಮ ಅಜ್ಜನವರನ್ನು ಕಾಡಿರಬೇಕು. ಹೀರೇಕೆರೂರಿನಲ್ಲಿ ಹೋಟೆಲ್ ಉದ್ಯಮದಿಂದ ಬರುವ ಅಲ್ಪ,ಸ್ವಲ್ಪ ಆದಾಯದಲ್ಲೇ.. ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸವನ್ನು ನೀಡಿದ್ದರು.ಅವರು ಹೀರೆಕೆರೂರಿನಲ್ಲಿ ಹೊಟೇಲ್ ವ್ಯಾಪಾರ



ನಡೆಸುತ್ತಿದ್ದ ಸಂದರ್ಭದಲ್ಲಿ ಅವರಿಗೆ ದೇಶ ಪ್ರೇಮದ ಹಸಿವು ತೀವ್ರವಾಗತೊಡಗಿತೆಂದು ಕಾಣಿಸುತ್ತದೆ, ಎಳೆಯ ಪ್ರಾಯದಲ್ಲೇ ಪುಸ್ತಕಗಳನ್ನು ಓದುವ ಹುಚ್ಚು ಅವರಿಗೆ, ಆ ದಿನಗಳಲ್ಲೇ ಅವರಿಗೆ ಸಾಹಿತ್ಯದ ಪ್ರೀತಿ ಎಷ್ಟಿತ್ತೆಂದರೆ ಗಳಗನಾಥರ ಪುಸ್ತಕಗಳನ್ನು ಓದುತ್ತಿದ್ದರಂತೆ, ಬಹುಶ ಅವರ ಓದಿನ ಪ್ರಭಾವದಿಂದಲೇ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕುವಂತೆ ಪ್ರೇರೇಪಿಸಿರಬೇಕು..

ಹೀರೆಕೇರೂರಿನಲ್ಲಿ ಹೊಟೇಲ ವ್ಯವಹಾರ ಮಾಡುತ್ತಿದ್ದ ಸಂದರ್ಭದಲ್ಲಿ ನಡೆದ ಘಟನೆ, ಅವರ ದೇಶಪ್ರೇಮದ ಹಿನ್ನೆಲೆಯಲ್ಲಿ ಹೋಟೆಲ್ ಗೆ ಬರುವ ಪ್ರತಿಯೊಬ್ಬ ಗಿರಾಕಿಗಳಿಗೂ ದೇಶಪ್ರೇಮದ ಬಗ್ಗೆ ಹುರಿದುಂಬಿಸುತ್ತಿದ್ದು ಇದನ್ನು ಗಮನಿಸಿದ ಬ್ರಿಟೀಷ್ ಅಧಿಕಾರಿ ಗಳು ಇವರನ್ನು ಜೈಲಿಗೆ ಹಾಕಿದರಂತೆ. ಶರಣಾಗತಿ ಬಯಸಿದವರನ್ನು ಬಿಡುಗಡೆ ಮಾಡಿದರಂತೆ, ಆದರೆ ಶರಣಾಗತಿಗೆ ಒಪ್ಪದ ನಮ್ಮಜ್ಜ ರಾಮಕೃಷ್ಣ ಭಟ್ಟರು ಜೈಲು ಪಾಲಾದರು, ಇವರನ್ನು ಹಿಂಡಲಗಿ, ಧಾರವಾಡ, ಯರವಾಡ, ಬೆಳಗಾವಿ ಜೈಲಿನಲ್ಲಿ ಬಂಧಿಸಲಾಗಿತ್ತು.

1972ರಲ್ಲಿ ಕೇಂದ್ರ ಸರಕಾರದಿಂದ ತಾಮ್ರಪತ್ರ ಫಲಕ ದೊರಕಿತು. 1942ರಲ್ಲಿ ಬ್ರಿಟಿಷರೇ ಭಾರತ ಬಿಟ್ಟು ತೊಲಗಿರಿ ಚಳುವಳಿಯಲ್ಲಿ ಭಾಗವಹಿಸಿ ಆಕ್ಟೊಬರ್ 10 ,1942 ರಂದು ಜೈಲು ಸೇರಿದರು.ಸುಮಾರು ಹನ್ನೊಂದು ತಿಂಗಳು, ಇಪ್ಪತ್ತು ದಿವಸಗಳ ಕಾಲ ಸೆರೆವಾಸ ಅನುಭವಿಸಿದರು. ಹಿಂಡಲಗಿ ಜೈಲಿನಲ್ಲಿ ಕಳಪೆ ಮಟ್ಟದ ಆಹಾರ ಸೇವನೆ ಇವರ ದೇಹದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದ್ದ ಕಾರಣ ಆಸ್ಪತ್ರೆಗೆ ದಾಖಲಾದರಂತೆ. ಅಲ್ಲಿಂದ ಹೇಗೋ ಬಿಡುಗಡೆ ಹೊಂದಿದರಂತೆ. ಹೀರೆಕೇರೂರ್ ನಲ್ಲಿ ಹೋಟೆಲ್ ನಡೆಸುತ್ತಿದ್ದ ಸಂದರ್ಭದಲ್ಲಿ ಅಲ್ಲಲ್ಲಿ ರಾತ್ರಿ ವೇಳೆಯಲ್ಲಿ ಸ್ವಾತಂತ್ರ್ಯ ಹೋರಾಟದ ಸಭೆಗಳನ್ನು ನಡೆಸುತ್ತಿದ್ದರಂತೆ ಆಗ ಬ್ರಿಟಿಷ್ ಅಧಿಕಾರಿಯೊಬ್ಬ ಜನರನ್ನು ಚದುರಿಸಲು ಹಾರಿಸಿದ ಗುಂಡು ಸಿಡಿದ್ದರಿಂದ ಗುಂಡಿನ ಕಿಡಿಯೊಂದು ಅಜ್ಜ ರಾಮಕೃಷ್ಣ ಭಟ್ಟರ ಎದೆಗೆ ತಾಕಿದ್ದು ಅವರ ಎದೆಯ ಮೇಲೆ ಅದೊಂದು ಮರೆಯದ ಕಲೆಯಾಗಿ ಉಳಿದು ಹೋಗಿತ್ತು.. ಇದು ಅವರ ಹೋರಾಟದ ತೀವ್ರತೆ ಎಷ್ಟಿತ್ತೆಂದು ತೋರಿಸುತ್ತದೆ. ಸ್ಥಳೀಯ ರಾಜಕಾರಣಿ ಜಿ ವಿ ಶಂಕರ್ ಜೊತೆ ಜೈಲಿನಲ್ಲಿ ಕಾಲ ಕಳೆದಿದ್ದರು. ಹೋಟೆಲ್ ವ್ಯಾಪಾರದ ಜೊತೆಯಲ್ಲಿ ಅದೆಷ್ಟೋ ಜನರಿಗೆ ವಾರನ್ನ ನೀಡಿದ್ದರು, ಅದೆಷ್ಟೋ ಜನರಿಗೆ ಅವರ ಕಷ್ಟದಲ್ಲಿ ನೆರವಾಗಿದ್ದರು ಮುಂದಿನ ದಿನಗಳಲ್ಲಿ ಅವರ. ಹೋಟೆಲ್ ದಂಧೆ ಸೋಲಿನತ್ತ ವಾಲಿದಾಗ ಪುನಃ ಊರಿನತ್ತ ಮುಖ ಮಾಡಿದ ಅಜ್ಜ ರಾಮಕೃಷ್ಣ ಭಟ್ಟರು ಸಾಕಷ್ಟು ಬಡತನದ ನೋವು ಕಂಡರು.ಸ್ವಾತಂತ್ರ್ಯ ಹೋರಾಟಗಾರರಿಗೆ ಸಿಗುವ ಪಿಂಚಣಿ ಹಣಕೋಸ್ಕರ ಅವರು ಅದೆಷ್ಟು ಸಲ ಕಛೇರಿಗಳಿಗೆ ಅಲೆದಾಡಿದ್ದು ಇನ್ನೂ ನೆನಪಲ್ಲಿ ಉಳಿದಿದೆ..ಆ ಕಾಲದಲ್ಲೇ ಸ್ವದೇಶಿ ಪ್ರೇಮದ ಪ್ರೀತಿಗೆ ಬದ್ಧರಾದ ನಮ್ಮ ಅಜ್ಜ ಖಾದಿ ಬಟ್ಟೆ ತೊಡುವುದಕ್ಕೆ ನಿರ್ಧಾರ ಮಾಡಿದರು,ಸರಳ ಜೀವನ,ಸರಳ ಆಹಾರ ಪದ್ದತಿ ಅವರ ಧ್ಯೇಯ ಮಂತ್ರವಾಗಿತ್ತು.ಸಾವಿನ ತನಕವೂ ಅದೇ ಖಾದಿ ಜುಬ್ಬಾ,ಪಂಚೆ ಅವರ ಧಿರಿಸು. ಪಕ್ಕಾಗಾಂಧಿ ತಾತನಂತೆ ಕಾಣುತ್ತಿದ್ದರು ಡಿಸೆಂಬರ್ 2 . 1995 ನೇ ತಮ್ಮ ಜೀವನದ ಕೊನೆಯ ಪಯಣ ಮುಗಿಸಿ ಈ ಲೋಕ ತ್ಯಜಿಸಿದರು. ಈ ಹೋರಾಟಗಾರನಿಗೆ ನನ್ನದೊಂದು ನುಡಿನಮನ.

ಈ ಎಪ್ಪತ್ತೈದನೇ ಸ್ವಾತಂತ್ರ್ಯ ದಿನದ ಸಂಧರ್ಭದಲ್ಲಿ ಅವರ ಮನೆಯನ್ನು..ಸ್ವಾತಂತ್ರ ಹೋರಾಟಗಾರರ ಮನೆಯೆಂದು ನಾಮಫಲಕ ಅಳವಡಿಸಿ,ಅವರ ಮನೆಯವರಿಗೆ ರಾಷ್ಟ್ರಧ್ವಜ ನೀಡಿ ಗೌರವಿಸಲಾಯಿತು.



ವೀಣಾ ರಮೇಶ್

# ತಾಳ ಮದ್ದಳೆ ವೀರ ಓಣಿಮನೆ ಅಣ್ಣಪ್ಪ ಕಾರಂತ್

ಮಾಗಧ, ಕೌರವ, ರಾವಣ ಪಾತ್ರ ಮಾಡಿದರೂ ಇವರು ಮಿಂಚುತ್ತಿದ್ದರು.

ಕಾಂಗ್ರೆಸ್ ಧುರೀಣ ಕೋಣಿ ಕೃಷ್ಣದೇವ ಕಾರಂತರ ಚಿಕ್ಕಪ್ಪನವರಾದ ಓಣಿಮನೆ ಅಣ್ಣಪ್ಪ ಕಾರಂತರ ಬಗ್ಗೆ ಅವರು ಹೆಮ್ಮೆಯಿಂದ ಹೇಳುತ್ತಾರೆ. "ಪತ್ನಿಯನ್ನು ಸಣ್ಣ ಪ್ರಾಯದಲ್ಲೇ, ಕಳೆದುಕೊಂಡ ಅವರು, ತಮ್ಮ ಬಗ್ಗೆ ಯಾವುದೇ ದಾಖಲೆಯನ್ನು ಇರಿಸಿಕೊಂಡಿರುವುದು ನಮಗೆ ಸಿಗಲಿಲ್ಲ. ಅವರಿಗೆ ಸ್ವಾತಂತ್ರ್ಯ ಹೋರಾಟಗಾರ ಎಂದು ಸರಕಾರ ನೀಡಿದ 6 ಎಕ್ರೆ ಭುಮಿಯನ್ನು ಗ್ರಾಮಕ್ಕೆ ಬಿಟ್ಟುಕೊಟ್ಟವರು ಎನ್ನುತ್ತಾರೆ 1962ರಲ್ಲಿ ನಿಧನರಾದ ಅಣ್ಣಪ್ಪ ಕಾರಂತರ ಸ್ವಾತಂತ್ರ್ಯ ಹೋರಾಟ ಸ್ಮರಣೀಯವಾಗಿ ಇತಿಹಾಸ ಪುಟದಲ್ಲಿ ಉಳಿದಿದೆ".

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಬಹುಮುಖ್ಯ ಪಾತ್ರ ವಹಿಸಿದ ಕೋಣಿ ಅಣ್ಣಪ್ಪ ಕಾರಂತರು. ಕುಂದಾಪುರ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಮುಂಚೂಣಿಯಲ್ಲಿದ್ದ ಕೃಷ್ಣರಾಯ ಕೊಡ್ಗಿಯವರ ಆಪ್ತರು. ಇವರು ಕೋಣಿ ಗ್ರಾಮದ ಗಣ್ಯ ಮನೆತನದ ನಾಯಕ. ಮಹಾತ್ಮ ಗಾಂಧೀಜಿಯವರ ಕಟ್ಟಾ ಅಭಿಮಾನಿ.

ಮಹಾತ್ಮ ಗಾಂಧೀಜಿಯವರ ಸ್ವರಾಜ್ಯ ಚಳುವಳಿಯನ್ನು ಕರಾವಳಿ ಜಿಲ್ಲೆಯಾದ್ಯಂತ ವಿಸ್ತರಿಸುವಲ್ಲಿ ಕೃಷ್ಣರಾಯ ಕೊಡ್ಗಿ, ಯು.ಎಸ್.ಫಣಿಯಾಣಿ, ರಾಮರಾಯ ಮಲ್ಯರೊಂದಿಗೆ ಶ್ರಮಿಸಿದ್ದರು.

ಕುಂದಾಪುರದಲ್ಲಿ ಉಪ್ಪಿನ ಸತ್ಯಾಗ್ರಹ ಬೃಹತ್ ಆಂದೋಲನವಾಗಿ ರೂಪುಗೊಂಡಿತ್ತು. ಪೋಲೀಸರು ತಮ್ಮನ್ನು ಬಂಧಿಸಿ ಜೈಲಿಗಟ್ಟಲಿದ್ದಾರೆ ಎಂಬ ಹೆದರಿಕೆ ಇರಲಿಲ್ಲ.

ತಮ್ಮ ನಾಯಕತ್ವಗುಣ, ಸುದೃಢ ಮೈಕಟ್ಟು, ಹುಲಿಮೀಸೆ ನೇರ ನುಡಿಯಿಂದ ಎದ್ದು ಕಾಣುವಂತ ವ್ಯಕ್ತಿತ್ವ ಹೊಂದಿದ್ದ ಅಣ್ಣಪ್ಪ ಕಾರಂತರು, ಕೃಷಿ , ತೋಟಗಾರಿಕೆ , ಸಹಕಾರ ಕ್ಷೇತ್ರದಲ್ಲಿ ದುಡಿದವರು ಸಾಹಿತ್ಯ, ಜಾನಪದ, ರಂಗಭೂಮಿಯಲ್ಲಿ ಆಸಕ್ತಿ ಹೊಂದಿದವರು.

ಕೋಣಿಯ ಅವರ ದೊಡ್ಡ ಮನೆ ಅಂದು ಜನಸಾಮಾನ್ಯರ ದೃಷ್ಟಿಯಲ್ಲಿ ಅರಮನೆಯೇ ಆಗಿತ್ತು. ಕುಂದಾಪುರ ತಾಲ್ಲೂಕಿನ ಪೂರ್ವ ಇತಿಹಾಸ ತಿಳಿಸುವ ಅನೇಕ ದಾಖಲೆಗಳು ಅವರಲ್ಲಿತ್ತು. ಕಾಲಕ್ಕೆ ತಕ್ಕಂತೆ ಬದಲಾದ ಕೌಟುಂಬಿಕ ವ್ಯವಸ್ಥೆಯಿಂದ ಇಂದು ಮಾಹಿತಿಗಳು ಲಭ್ಯವಾಗುತ್ತಿಲ್ಲ. ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಕಾಲದಲ್ಲಿ ಅಣ್ಣಪ್ಪ ಕಾರಂತರನ್ನು ಮರೆಯುವುದು ಸಾಧ್ಯವಿಲ್ಲ.

# ಎಚ್ಎಮ್ಎಮ್ – ವಿಕೆಆರ್ ಶಾಲೆಗಳಲ್ಲಿ ಗಾಂಧೀ ಜಯಂತಿ

ಕುಂದಾಪುರ ಎಜ್ಯುಕೇಶನ್ ಸೊಸೈಟಿ ಪ್ರವರ್ತಿತ ಎಚ್ಎಮ್ಎಮ್ ಆಂಗ್ಲ ಪ್ರಾಥಮಿಕ ಮತ್ತು ವಿಕೆಆರ್ ಆಚಾರ್ಯ ಸ್ಮಾರಕ ಆಂಗ್ಲ ಪ್ರೌಢ ಶಾಲೆಯಲ್ಲಿ ಮಹಾತ್ಮ ಗಾಂಧೀ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಆಚರಿಸಲಾಯಿತು. ಕುಂದಾಪುರ ಎಜ್ಯುಕೇಶನ್ ಸೊಸೈಟಿಯ ಅಧ್ಯಕ್ಷರು ಮತ್ತು ಸಂಚಾಲಕರಾದ ಬಿ. ಎಮ್. ಸುಕುಮಾರ ಶೆಟ್ಟಿ ಆಗಮಿಸಿ, ಮಹಾತ್ಮರ ಭಾವಚಿತ್ರಕ್ಕೆ ಪುಷ್ಪನಮನಗೈದರು. ನಂತರ ಎಲ್ಲಾ ಶಿಕ್ಷಕರಿಂದ ಸರ್ವಧರ್ಮ ಪ್ರಾರ್ಥನೆ ನೆರವೇರಿತು.

ಸಂಸ್ಥೆಯ ಪ್ರಾಂಶುಪಾಲೆ ಶ್ರೀಮತಿ ಚಿಂತನಾ ರಾಜೇಶ್, ಉಪಪ್ರಾಂಶುಪಾಲೆ ಶುಭಾ ಕೆ. ಎನ್., ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕ ಜಗದೀಶ್ ಆಚಾರ್, ಮುಖ್ಯ ಸಹಶಿಕ್ಷಕಿ ಕವಿತಾ ಭಟ್, ಪೂರ್ವ ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ಲತಾ ಜಿ. ಭಟ್, ಪ್ರೌಢ ಶಾಲಾ ಸಂಯೋಜಕ ಶಿಕ್ಷಕ ಚಂದ್ರಶೇಖರ ಶೆಟ್ಟಿ ಪ್ರಾಥಮಿಕ ವಿಭಾಗದ ಸಂಯೋಜಕ ಶಿಕ್ಷಕರಾದ ಕವಿತಾ ಪಿ. ಮತ್ತು ವೀರೇಂದ್ರ ನಾಯಕ್ ಹಾಗೂ ಎಲ್ಲಾ ಶಿಕ್ಷಕರು ಉಪಸ್ಥಿತರಿದ್ದರು. ಮಹಾತ್ಮರ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿದ ಶಿಕ್ಷಕಿ ದಿವ್ಯಾ ಪ್ರೀತಿ ನಜರತ್, ಗಾಂಧೀ ಕೇವಲ ವ್ಯಕ್ತಿಯಲ್ಲ; ನಮ್ಮೆಲ್ಲರ ಶಕ್ತಿ ಎನ್ನುವ ಸಂದೇಶವನ್ನು ಬಿತ್ತರಿಸಿದರು.